MATTER UNDER RULE 312

re: Irregularities in T.D.B. Holenarasipur.

ಅಧ್ಯಕ್ಷರು. – ಈಗ ನಿಯಮ ೩೧೨ರ ಕೆಳಗೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಿಯಮ ೩೧೨ ರ ಕೆಳಗೆ ಹೊಳೆನರಸೀಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿನ ಅಕ್ರಮ ವ್ಯವಹಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ತಮ್ಮ ಅನುಮತಿ ಕೇಳುತ್ತೇನೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದವಶ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಮಂಡಳಿಯಲ್ಲಾದ ಅವ್ಯವಹಾರಗಳ ಬಗ್ಗೆ ಸುಮಾರು ಹದಿನಾರು ಆಪಾದನೆಗಳ ಪಟ್ಟಿಯನ್ನು ಸರ್ಕಾರಕ್ಕೆ ಒಂದು ವರ್ಷದಲ್ಲಿ ಸಲ್ಲಿಸಿದ್ದೇವೆ. ಇದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ಪೂರ್ವಭಾವಿಯಾಗಿ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ನಿರ್ಣಯ ಮಾಡಲಾಗುವುದೆಂದು ಸರ್ಕಾರ ಹಿಂದೆ ಆಶ್ವಾಸನೆ ಕೊಟ್ಟಿತ್ತು. ಆಗ ಮಾನ್ಯ ಪ್ರಭಾಕರ್ ಅವರು ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದರು. ಈ ತಾಲ್ಲೂಕು ಮಂಡಲಿಯ ವ್ಯವಹಾರ ಸರ್ವಸಮ್ಮತವಾಗಿಲ್ಲವೆನ್ನುವುದು ಪೂರ್ವಭಾವಿ ವಿಚಾರಣೆಯಲ್ಲೇ ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಈ ಬಗ್ಗೆ ನಾನು ವಿಭಾಗಾಧಿಕಾರಿಯವರೊಂದಿಗೆ ಚರ್ಚೆ ಮಾಡಿದ್ದೇನೆ. ಮಾಡಿರತಕ್ಕ ಆಪಾದನೆಗಳಲ್ಲಿ ಬಹುಪಾಲು ಆಪಾದನೆಗಳು ಮೇಲುನೋಟಕ್ಕೆ ಸ್ಥಿರಪಟ್ಟಿವೆ ಎಂದು ಜಿಲ್ಲಾಧಿಕಾರಿ ಮತ್ತು ವಿಭಾಗಾಧಿಕಾರಿಯವರೊಡನೆ ನಡೆಸಿದ ಚರ್ಚೆ ಕಾಲದಲ್ಲಿ ಕೇಳಿದ್ದೇನೆ. ಯಾರೇ ಅಧಿಕಾರವನ್ನು ನಡೆಸಿಕೊಂಡು ಹೋಗಲಿ ಅಲ್ಲಿ ನಡೆಯತಕ್ಕ ಕೆಲಸ ಸರ್ವರಿಗೂ ಸಮರ್ಪಕವಾಗಿರುವ ರೀತಿಯಲ್ಲಿ ಕಾನೂನಿನ ಚೌಕಟ್ಟಿನೊಳಗಡೆ ನಡೆಯಬೇಕಾಗುತ್ತದೆ. ಅದನ್ನು ಮಾನ್ಯ ಸಚಿವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮುಖಾಂತರ ಹಲವಾರು ಜನೋಪಯೋಗಿ ಕಾರ್ಯಗಳು ನಡೆಯುತ್ತವೆ. ಇಂತಹ ಕಾರ್ಯಗಳನ್ನು ಮಾಡುವಾಗ ಎಲ್ಲರಿಗೂ ಸರ್ವಸಮ್ಮತವಾದ ರೀತಿಯಲ್ಲಿ ಕೆಲಸಗಳು ಆಗದೆ ಹೋದರೆ ಅವುಗಳಿಗೆ ಕೊಟ್ಟಂಥ ಹಣ ದುರುಪಯೋಗವಾಗುತ್ತದೆ. ಆದುದರಿಂದ ಅಲ್ಲಿ ನಡೆಯುವ ಅವ್ಯವಹಾರಗಳನ್ನು ತಡೆಗಟ್ಟುವುದು ಸರ್ಕಾರದ ಆದ್ಯಕರ್ತವ್ಯ. ಮೊನ್ನೆ ಕುರಿ ಮಂಡಲಿಯ ಅಧ್ಯಕ್ಷರನ್ನು ಸಸ್ಪೆಂಡ್ ಮಾಡಿದ್ದಾರೆ. ಅವರನ್ನು ಯಾವ ಕಾರಣದಿಂದ ಸಸ್ಪೆಂಡ್ ಮಾಡಲಾಗಿದೆ ಎಂದು ಪತ್ರಿಕೆಗಳಲ್ಲಿ ಓದಿದೆ. ಅವರು ಉಪಯೋಗ ಮಾಡುತ್ತಿದ್ದ ಕಾರಿಗೆ ಸಂಬಂಧಿಸಿದಂತೆ ಎರಡು ಲಾಗ್ ಪುಸ್ತಕಗಳನ್ನಿಟ್ಟಿದರು ಎನ್ನುವುದೂ ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಇದ್ದ ಒಂದು ಕಾರಣ ಬಾಕಿ ಕಾರಣಗಳನ್ನು ನಾನು ಓದಲಿಲ್ಲ. ಅಂತೆಯೇ, ನಾವು ತಾಲ್ಲೂಕು ಮಂಡಲಿಯ ಅಧ್ಯಕ್ಷರ ಮೇಲೆ ಮಾಡಿರತಕ್ಕ ಹದಿನಾರು ಆಪಾದನೆಗಳು ಬಹಳ ಗುರುತರವಾದವುಗಳಾಗಿವೆ. ರಾಜ್ಯ ಮಟ್ಟದ ಕುರಿ ಮಂಡಲಿ ಅಧ್ಯಕ್ಷರು ಉಪಯೋಗ ಮಾಡುತ್ತಿದ್ದ ಕಾರಿಗೆ ಸಂಬಂಧಿಸಿದಂತೆ ಎರಡು ಲಾಗ್ ಪುಸ್ತಕಗಳನ್ನಿಟ್ಟ ಕಾರಣಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಿರುವಾಗ, ಪ್ರಮುಖವಾದ ಆಪಾದನೆಗಳು ಪ್ರಥಮ ನೋಟಕ್ಕೆ ಸಾಬೀತಾಗಿರುವ ಸನ್ನಿವೇಶದಲ್ಲಿ ಈ ತಾಲ್ಲೂಕು ಮಂಡಲಿ ಅಧ್ಯಕ್ಷರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಸುಮಾರು ನಲವತ್ತು-ಐವತ್ತು ಸಾವಿರ ರೂಪಾಯಿಗಳನ್ನು ಯಾವುದೇ ಮಂಜೂರಾತಿ ಇಲ್ಲದೆ ಅವರ ಹೆಸರಿನಲ್ಲಿ ಡ್ರಾ ಮಾಡಿಕೊಳ್ಳುತ್ತಾರೆ, ಮತ್ತು ಅವರೇ ಬಳಸುತ್ತಾರೆ ಎಂದು ಹೇಳುವುದಾದರೆ ಅದು ಅವರ ಖಾಸಗಿ ವ್ಯವಹಾರವಾಗುವುದಿಲ್ಲ. ಹಣಕಾಸಿನ ಮಂಜೂರಾತಿ ಅಧಿಕಾರ ಯಾರು ಯಾರಿಗೆ ಎಷ್ಟೆಷ್ಟು ಇರಬೇಕು, ಕ್ಷೇತ್ರ ವಿಸ್ತರಣಾಧಿಕಾರಿಗೆ ಎಷ್ಟಿರಬೇಕು, ಜಿಲ್ಲಾಧಿಕಾರಿಗೆ ಎಷ್ಟಿರಬೇಕು, ವಿಭಾಗಾಧಿಕಾರಿಗೆ ಎಷ್ಟಿರಬೇಕು ಮತ್ತು ಸರ್ಕಾರಕ್ಕೆ ಎಷ್ಟಿರಬೇಕೆಂದು ನಿಯಮವಿದೆ. ಈ ಬಗ್ಗೆ ಸರ್ಕಾರ ಅಧಿಕಾರ ಕೊಟ್ಟಿದೆ. ಆದರೆ, ಯಾವುದೇ ಅನುಮತಿ ಇಲ್ಲದೆ ಒಬ್ಬ ಅಧ್ಯಕ್ಷರು ಅವರ ಹೆಸರಿಗೆ ಹಣವನ್ನು ಡ್ರಾ ಮಾಡಿಕೊಂಡು ಖರ್ಚು ಮಾಡುತ್ತಾರೆಂದರೆ ಹೇಗೆ? ಈ ರಾಜ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಧಿಕಾರವಿದೆ. ಅಂದಾಕ್ಷಣ ಅವರು ಸರ್ಕಾರದ ಹುಜೂರ್ ಟ್ರಜರಿಯಲ್ಲಿರುವ ಹಣವನ್ನು ಡ್ರಾ ಮಾಡಿಕೊಂಡು ಖರ್ಚು ಮಾಡಿಕೊಳ್ಳಬಹುದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಆಪಾದನೆಗಳು ಸಾಬೀತಾಗಿರುವ ಕಾಲದಲ್ಲಿ ಅಧ್ಯಕ್ಷರನ್ನು ಸಸ್ಪೆಂಡ್ ಮಾಡಿ ಅವ್ಯವಸ್ಥೆಯನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ? ಜೀಪ್ ಪ್ರಕರಣವಲ್ಲಿ ಸುಮಾರು ನಲವತ್ತು-ಐವತ್ತು ಸಾವಿರ ರೂಪಾಯಿಗಳನ್ನು ಮಂಜೂರಾತಿಯಿಲ್ಲದೆ ಖರ್ಚು ಮಾಡಿದ್ದಾರೆ. ಒಂದು ಟೆಲಿಫೋನನ್ನು ಸ್ವಂತಕ್ಕೆ ಉಪಯೋಗಿಸುತ್ತಿದ್ದಾರೆ. ಅದಕ್ಕಾಗಿ ಸುಮಾರು

ಆರು ನೂರು ರೂಪಾಯಿಗಳು ಪ್ರತಿ ತಿಂಗಳು ಖರ್ಚು ಮಾಡಲಾಗುತ್ತಿದೆ. ಇದೇನು ಸ್ವಂತ ವ್ಯವಹಾರವೆ? ಆದುದರಿಂದ, ಇದರ ಬಗ್ಗೆ ಒಂದು ಸ್ಪಷ್ಟವಾದ ಆಶ್ವಾಸನೆಯನ್ನು ಸದನದಲ್ಲಿ ಕೊಡಲಿಕ್ಕೆ ಮಾನ್ಯ ಸಚಿವರು ಇಚ್ಛಿಪಡುತ್ತಾರೆಯೇ?

(ಎಸ್. ಮುನಿರಾಜು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಶ್ರೀ ಬೇಗಾನೆ ರಾಮಯ್ಯ.—ದೇವೇಗೌಡರು ಸಲ್ಲಿಸಿದ ೧೫ ಆರೋಪಗಳಲ್ಲಿ ೧೨ ಆರೋಪಗಳಂ ಮೇಲ್ನೋಟಕ್ಕೆ ಸಾಬೀತು ಆಗಿವೆ ಎನ್ನುವ ಭಾವನೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಸರ್ಕಾರ ದವರು ಬಂದಿರತಕ್ಕ ವರದಿಯನ್ನು ಅನುಸರಿಸಿ ಈಗಾಗಲೇ ಮೈಸೂರು ವಿಭಾಗಾಧಿಕಾರಿಯವರಿಗೆ ಮೇಲ್ಕಂಡ ಆರೋಪಗಳನ್ನು ವಿಚಾರಣೆ ಮಾಡಲು ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಕಾಯಿದೆಯ ೧೯೬ ಹಾಗೂ ೨೮೮ನೇ ನಿಯಮಾವಳಿಯ ಪ್ರಕಾರ ಆದೇಶ ನೀಡಲಾಗಿದೆ. ಮಾನ್ಯ ಹಿರಿಯ ಸದಸ್ಯರಾದಂತ ದೇವೇಗೌಡರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಸರ್ಕಾರದ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವಂತಾದ್ದು ಮುಖ್ಯವಾಗಿ ತಾಲ್ಲೂಕಂ ಬೋರ್ಡಿಗೆ ಸೇರಿದ್ದು. ಈ ವರದಿ ಬಂದನಂತರ ಕೂಲಂಕುಷವಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ೧೫ ಆಪಾದನೆಗಳಲ್ಲಿ ೧೨ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿವೆಯೆಂದು ಮಂತ್ರಿಗಳು ಹೇಳಿದರು. ಇದು ೧೯೭೯ರಲ್ಲಿ ಕೊಟ್ಟಂತ ಆಪಾದನೆಗಳ ಪಟ್ಟಿ ಮಾನ್ಯ ಮುಖ್ಯಮಂತ್ರಿಗಳು ಆಡ್ಮಿನಿಸ್ಟ್ರೇಷನ್ ಟೋನ್‌ಅಪ್ ಮಾಡುವ ಬಗ್ಗೆ ಬಹಳಷ್ಟು ಕಳಕಳಿ ವಹಿಸುತ್ತಿದ್ದಾರೆ ಎನ್ನುವುದು ತಮ್ಮ ಒಂದು ವ್ಯವಹಾರದ ಕಾರ್ಯಾಚರಣೆಯಿಂದ ಗೊತ್ತಾಗುತ್ತದೆ. ಹೊಳೆನರಸೀಪುರದಲ್ಲಿ ತಾಲ್ಲೂಕು ಬೋರ್ಡಿನಲ್ಲಿ ನಡೆದಿರತಕ್ಕ ಆಕ್ರಮಗಳು ಒಂದು ಭಾಗ ಇದ್ದರೆ, ಮೊನ್ನೆ ತಾನೇ ಸುಮಾರು ಒಂದು ಸಾವಿರ ಜನತಾ ಗೃಹಗಳನ್ನು ಕೊಡುವುದರಲ್ಲಿ ಯಾರಿಗೆ ಕೊಡಬೇಕೋ ಅವರಿಗೆ ಕೊಡಲಿಲ್ಲ. ಹರಿಜನ ಗಿರಿಜನರಿಗೆ ಆದ್ಯತೆ ಮೇಲೆ ಕೊಡಬೇಕು, ನಂತರ ಮನೆ ಇಲ್ಲದೇ ಇರತಕ್ಕ ಬಡವರು ಯಾರಿದ್ದಾರೆ ಅವರಿಗೆ ಕೊಡಬೇಕೆಂದು ಇದೆ. ಆದರೆ, ಸರ್ಕಾರದ ಪಿಯೋರಿಟಿಗಳನ್ನು ದೂರೀಕರಿಸಿ ಸರ್ಕಾರಿ ನೌಕರರಿಗೆ, ಅವರು ಮಕ್ಕಳು ಮತ್ತು ಹೆಂಡತಿಯರ ಹೆಸರಿನಲ್ಲಿ ಕೊಟ್ಟಿದ್ದಾರೆ. ಶ್ರೀಮಂತರಿಗೆ ಮನೆಗಳನ್ನು ಕೊಟ್ಟಿದ್ದಾರೆ, ನನ್ನ ಮಕ್ಕಳ ಹೆಸರಿನಲ್ಲಿ ಕೊಡತಕ್ಕಂಥಾದ್ದು, ಅವರು ದನಗಳನ್ನು, ಕುರಿ ಗಳನ್ನು ಇಟ್ಟುಕೊಳ್ಳಲಿಕ್ಕೆ ಉಪಯೋಗಿಸುತ್ತಿದ್ದಾರೆ, ಇಂಥ ಆಕ್ರಮಗಳು ಇತ್ತೀಚೆಗೆ ನಡೆದಿರತ ಕ್ಕಂಥಾದ್ದು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇನೆ. ಸಿ. ಓ. ಡಿ. ಯಿಂದ ಎನ್‌ಕ್ವೈರಿ ಮಾಡಿಸಿ ಎಂದು ಹೇಳಿದ್ದೇನೆ. ವಿಭಾಗಾಧಿಕಾರಿಯವರಿಂದಲೂ ವಿಚಾರಣೆ ನಡೆಸಿ, ಯಾರು ಯಾರು ಇದರ ಒಂದು ಅನುಕೂಲವನ್ನು ಪಡೆದುಕೊಂಡಿದ್ದಾರೆ ಅವರ ಬಗ್ಗೆ ಸಿ. ಓ. ಡಿ. ಎನ್‌ಕ್ವೈರಿ ಮಾಡಿಸುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ? ಸರ್ಕಾರ ಕೊಡತಕ್ಕ ಸಬ್ಸಿಡಿ ಹಣದಲ್ಲಿ ಅರ್ಧ ಭಾಗ ತಾಲ್ಲೂಕು ಬೋರ್ಡು ಪೊಸಗೀ ಸದಸ್ಯರುಗಳಿಗೆ ಸರ್ಕಾರಿ ನೌಕರರುಗಳಿಗೆ ಮನಸ್ಕೇಚ್ಛೆ ವಿತರಣೆ ಮಾಡಿ ದ್ದಾರೆ. ಹಿಂದಿನ ಸರ್ಕಾರ ಒಳ್ಳೆಯ ಕಳಕಳಿಯಿಂದ ಹತ್ತಾರುಕೋಟಿ ರೂಪಾಯಿಗಳನ್ನು ಮೀಸಲಾ ಗಿಟ್ಟಿತ್ತು. ತಾವು ಕೂಡ ೬ ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಒದಗಿಸಿದ್ದೀರಿ. ಸಬ್ಸಿಡಿ ಹಣ ವನ್ನು ಬಡವರು ಕೊಡುವುದಕ್ಕಾಗುವುದಿಲ್ಲ. ಸಬ್ಸಿಡಿ ಹಣ ಕೊಡತಕ್ಕವರು ಜಮೀನುದಾರರು, ಆರ್ಥಿಕವಾಗಿ ಶಕ್ತಿಯಿರತಕ್ಕವರು ೩೦೦ ರೂಪಾಯಿ ಕೊಡುತ್ತಾರೆ, ಬಡವರು ಕೂಲಿಯಿಂದ ಜೀವಿಸ ಬೇಡತಕ್ಕವರು ಎಲ್ಲಿ ಕೊಡುತ್ತಾರೆ ಡಿವಿಜನಲ್ ಕಮೀಷನರ್‌ರವರಿಂದ ವಿಚಾರಣೆ ಮಾಡಿಸುತ್ತೇನೆಂದೂ ತಾವು ಏನು ನಿರ್ಣಯ ಮಾಡಿದ್ದೀರಿ ಆದರ ಬಗ್ಗೆ ನನ್ನ ತಕರಾರು ಇಲ್ಲ. ನಾನು ಮೊನ್ನೆ ಏನು ಆಪಾದನೆ ಗಳ ಪಟ್ಟಿ ಕೊಟ್ಟಿದ್ದೇನೆ. It is the Taluk Board which implements the Peoples' Housing Scheme, HUDCO Scheme and 18% budget of the TDBs for the up lift ment of the drawn Trader. ಹರಿಜನರಿಗೋಸ್ಕರ ಏನಂ ಖರ್ಚು ಮಾಡುತ್ತಿದ್ದೇವೆ. ಆ ಭಾಗದ ಹಣ ಸಾಕಷ್ಟು ದುರುಪಯೋಗವಾಗಿದೆ, ಈ ಹಣದಲ್ಲಿ ಸರ್ಕಾರಿ ನೌಕರರಿಗೆ ಮನೆ ಕೊಟ್ಟಿದ್ದಾರೆ. ೧೦ ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಟ್ಟು ಖರ್ಚು ಮಾಡಿಸಿ ಪಾನಂ ಬೇಡ ಅನ್ನುವುದಿಲ್ಲ. ಹಣ ದುರುಪಯೋಗವಾಗಿರುವ ಬಗ್ಗೆ ಸಿ. ಓ. ಡಿ. ತನಿಖೆ ಮಾಡಿಸಿ,

ಕ್ರಮ ಏನಾದರೂ ತೆಗೆದುಕೊಳ್ಳಿ. If it is proved I will leave it to the Government ದಯಮಾಡಿ ಸ್ಪಷ್ಟೀಕರಣ ಕೊಡಬೇಕು. ೧೮ ಪರ್ಸೆಂಟ್ ಹಣ ಡ್ರಾ ಮಾಡಿ ಬೇರೆ ಕೆಲಸ ಕಾರ್ಯಗಳಿಗೆ ಉಪಯೋಗಿಸಿದ್ದಾರೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಿಖರವಾಗಿ ಹೇಳಬೇಕು. So far as Housing Scheme and 18% misapplication of funds meant for Sc/STs are concerned ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಹಣದಲ್ಲಿ ಏನು ಅಕ್ರಮ ನಡೆದಿದೆ ಅದರ ಬಗ್ಗೆ ಒಬ್ಬ ಹಿರಿಯ ಸಿ. ಓ. ಡಿ. ಅಧಿಕಾರಿಯಿಂದ ತನಿಖೆ ನಡೆಸಬೇಕೆಂದು ಹೇಳುತ್ತೇನೆ. ನನ್ನ ಸಮಾಜದವರಿಗೆ ಕೊಟ್ಟರೆ ಏತಕ್ಕೆ ಕೊಟ್ಟರು ? ದೇವೇಗೌಡರು ರಾಜಕೀಯ ಮಾಡಿದ್ದಾರೆಂದು ತಿಳಿಯಲಿ ಅಂತ ಕೊಟ್ಟಿದ್ದಾರೆಯೆ ? ಸ್ವಾಮಿ, ಭಾಗ್ಯಜ್ಯೋತಿ ಸ್ಕೀಮು ಜಾರಿಗೆ ತಂದರು, ಇದು ಹರಿಜನರಿಗೆ, ಬಡವರಿಗೆ ದೀಪದ ಸೌಕರ್ಯ ಒದಗಿಸುವ ದೃಷ್ಟಿಯಿಂದ ಜಾರಿಗೆ ತರಲಾಯಿತು. ಇವತ್ತು ಏನಾಗಿದೆ ನಮ್ಮಂಥ ದೊಡ್ಡವರು ಶ್ರೀಮಂತರು ದನದ ಕೊಟ್ಟಿಗೆಗೆ, ಕುರಿ ಕೊಟ್ಟಿಗೆಗೆ ಲೈಟುಗಳನ್ನು ಹಾಕಿಸಿಕೊಂಡಿದ್ದಾರೆ. ಜೋಗಿಯವರನ್ನು ಎರಡು ಲಾಕ್ ಬುಕ್ ಇಟ್ಟುಕೊಂಡಿದ್ದರು ಎಂದು ಸಸ್ಪೆಂಡ್ ಮಾಡಿದ್ದೀರಿ. ಇಷ್ಟೊಂದು ಗುರುತರವಾದ ಆಪಾದನೆಗಳು.....If they are not proved I will tender an unconditional apology in this House. ೧೮ ಪರ್ಸೆಂಟ್ ಹಣ ನಾವು ಏನು ಹರಿಜನರಿಗೆ ಖರ್ಚು ಮಾಡುತ್ತಿದ್ದೇವೆ, ಇದರಲ್ಲಿ ನಡೆದಿರತಕ್ಕ ದುರುಪಯೋಗದ ಬಗ್ಗೆ ಸಿ. ಓ. ಡಿ. ತನಿಖೆ ಮಾಡಿಸುತ್ತೇವೆಂದು ತಾವು ಹೇಳಿ. ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗಿದೆ.

೧೦-೩೦ ಎ. ಎಂ.

ಶ್ರೀ ಹೆಚ್ ಡಿ. ದೇವೇಗೌಡ —ಸ್ವಾಮಿ, ಈಗ ಒಂದು ಸಾವಿರ ಮನೆಗಳನ್ನು ಏನುಕೊಟ್ಟಿದ್ದೀರಾ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರಾದಂತ ದೇವೇಗೌಡರು ಗುರುತರವಾದ ಆಪಾದನೆ ಮಾಡಿದ್ದಾರೆ. ಅವರು ಈ ಸದನದ ಹಿರಿಯ ಸದಸ್ಯರು ಬಹುಶಃ ಅವರು ಈ ಆಪಾದನೆ ಮಾಡಬೇಕಾದರೆ ಸಾಕಷ್ಟು ಜವಾಬ್ದಾರಿಯಿಂದ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

SRI H. D. DEVEGOWDA.—If I have made any baseless allegation, I will applogise in this House. ದಯಮಾಡಿ ಎನ್‌ಕ್ವಯಿರಿ ಮಾಡಿಸಿ. Then you will come to know. COD is under your direct control. ದಯಮಾಡಿ ಎನ್‌ಕ್ವೈರಿ ಮಾಡಿಸಿ.

ಶ್ರೀ ಎಂ. ಚಂದ್ರಶೇಖರಿರ್.—ಸ್ವಾಮಿ, ಈಗ ೧೮ ಆಪಾದನೆಗಳು ರುಜುವಾತಾಗಿರುವುದೇ ಸಾಕ್ಷಿ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ತಾವು ಸಿ. ಒ. ಡಿ. ಎನ್‌ಕ್ವೈರಿ ಮಾಡಿಸಿದರೆ the whole thing will be revealed. ದಯಮಾಡಿ ಒಂದು ಸಾವಿರ ಮನೆಗಳ ಬಗ್ಗೆ ಸಿ. ಒ, ಡಿ. ಎನ್‌ಕ್ವೈರಿ ಮಾಡಿಸಬೇಕು. ಇದು ಪ್ರೂಫ್ ಆದಮೇಲೆ ತಮಗೆ ಏನು ಅನಿಸುತ್ತದೆ ಆ ರೀತಿ ವೆರಿಟ್ ಮೇಲೆ ಡಿಸೈಡ್ ಮಾಡಿ.

ಶ್ರೀ ಆರ್. ಗುಂಡೂರಾವ್.—ಈಗಾಗಲೇ ಗ್ರಾಮಾಂತರ ಅಭಿವೃದ್ಧಿ ಮಂತ್ರಿಗಳು ಡಿವಿಜನಲ್ ಕಮೀಷನರ್ ವರದಿ ಬಂದಿದ್ದು ೧೮ ಆಪಾದನೆಗಳು ನಿಜ ಇರಬಹುದು ಅಂತ ಸನ್ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಅಲ್ಲದೇ, ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಆದೇಶ ಕೊಟ್ಟಿದ್ದೇವೆ ಅಂತ ಸನ್ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಮೊನ್ನೆ ತಾವು ಕೊಟ್ಟ ಆರ್ಜಿಯಲ್ಲಿ ಕೆಲವು ಆಪಾದನೆ ಮಾಡಿ ಕೊಟ್ಟಿದ್ದೀರಾ ಪುನಃ ಈ ಸಭೆಯಲ್ಲಿ ಹೇಳುತ್ತೀದ್ದೀರಾ. ಆದುದರಿಂದ ಇದು ಗುರುತರವಾದ ಆಪಾದನೆ ಎಂದು ತಮ್ಮ ಮಾತನ್ನು ನಂಬಿ ವಿಚಾರಣೆ ಮಾಡಿಸುತ್ತೇನೆ. ತಾವು ಹೇಳಿದ ಪ್ರಕಾರ ನಡೆದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಯಾರೇ ಆಗಿರಲಿ ಕಾನೂನು ಕ್ರಮ ಕೈಗೊಳ್ಳುವುದರಲ್ಲಿ ಸರ್ಕಾರ ಹಿಂದೆ ಬೀಳುವುದಿಲ್ಲ ಎಂದು ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ದಯಮಾಡಿ ಸಿ. ಒ. ಡಿ. ಎನ್‌ಕ್ವಯಿರಿ ಮಾಡಿಸಬೇಕು.

SRI R. GUNDU RAO.—A senior officer of the COD will be sent, spot enquiry will be made and a detailed report will be placed on the floor of the House well in time. I do not hesitate to do that in the interest of the poor people of the State.

Strike by student of Homoeopathic College at Belgaum

SRI B. B. SAYANAK.—Sir, there is a Homoeopathic Medical College at Belgaum run by the People's Education Society registered under the Co-operative Societies Act, 1960. It was registered on 13th December 1967 and the College is run since then. In this Homoeopathic College there are ninehundred students and nineteen professors. Thery were two strikes by the students and the professors in the year 1978 and 1979. The then Chief Minister Sri D. Devraj Urs had issued an Extraordinary Gazette. I may be permitted to read this to enable the House to understand the state of affairs of the Society. The Extraordinary Gazette reads as follows :

"Whereas the Peoples Education Society at Belgaum is a Society registered under the Karnataka Societies Registration Act, 1960 (Karnataka Act No. 17 of 1960) ;

Whereas the Registrar of Societies, Belgaum has reported that the said Society has not been functioning properly and is mismanaged in a much as:—

(i) it has failed to furnish income and expenditure Statement to the Registrar every year as required under Section 13 of the Societies Registration Act, 1960 from the date of its registration and the accounts for the year 1969-70 to 1977-78 have been furnished on 16th March 1979 after insisting upon by the Registrar of Socieities ;

(ii) its funds are misused and heavy expenditure has been incurred by the Chairman without the approval of the general body ;

(iii) its accounts have been kept in various banks in the name of the Chairman, People's Education Society, Belgaum, Dr. A M. Shaik. But its accounts have not been brought on the record of the Society ;

(iv) it has failed to file the statements and returns to the Registrar of Societies since its inception as required under the Act ;